## ಅನಿಕೇತನ (1963)

ವಿಶ್ವಮಾನವ ಗೀತೆಯೆಂದು ಗುರುತಿಸಲ್ಪಟ್ಟಿರುವ 'ಅನಿಕೇತನ' ಕವನವನ್ನೊಳಗೊಂಡ ಅದೇ ಹೆಸರಿನ ಈ ಸಂಕಲನದಲ್ಲಿ, 40 ಕವಿತೆಗಳಿವೆ. ಕವಿ ಕಂಡ ದೃಶ್ಯಗಳು, ಉದಯರವಿಯ ಕೈತೋಟದಲ್ಲಿ ಬೆಳೆದಿದ್ದ ಜಾಜಿ, ಜರ್ಬರಾ, ಮ್ಯಾಗ್ನೋಲಿಯಾ ಗ್ರ್ಯಾಂಡಿಫ್ಲೋರಾ, ಮೊದಲಾದ ಹೂವುಗಳಿಂದ ಪಡೆದ ದರ್ಶನ ಇಲ್ಲಿ ಕವಿತೆಯ ರೂಪ ತಾಳಿವೆ. ಭಗವಂತನೇ ಕವಿ, ಸಹೃದಯನಾಂ ಎಂಬ ಭಾವ, ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದ ಅನಾದಿ ಕವಿ ತತ್ವದ ವಿಸ್ತರಣೆಯಾಗಿದೆ. ತಮ್ಮ ನಿವೃತ್ತಿಯ ದಿನ ಬರೆದ ನಿವೃತ್ತಮುಕ್ತನ ಅಭೀಪ್ಸೆ, ಮತ್ತೊಮ್ಮೆ ನವಿಲುಕಲ್ಲಿಗೆ ಬೇಟಿಕೊಟ್ಟಾಗ ಪಡೆದ ದರ್ಶನದ 'ನವಿಲುಕಲ್ಲಿನಲ್ಲಿ ಮತ್ತೊಮ್ಮೆ' ಕಾರುಕೊಂಡಾಗಿನ 'ಚಕ್ರಚರಣೆಗೆ ಸ್ವಾಗತಂ!' ಮೊದಲಾದ ಕವಿತೆಗಳು ಕುತೂಹಲ ಹುಟ್ಟಿಸುವುದರ ಜೊತೆಗೆ ಆಸಕ್ತಿದಾಯಕವೂ ಆಗಿವೆ.

**ಸಂಗ್ರಹದ ಕವನಗಳು**

1. ನಾಟ್ಯ ಸರಸ್ವತಿಗೆ
2. ಕಷ್ಟವಯ್ಯಾ ಹೊಗಲು ಕವಿಹೃದಯಕೆ
3. ಕಣ್ಣು
4. ಪಕ್ಷಿ
5. ಸೋಹಮಸ್ಮಿ!
6. ನವಿಲುಕಲ್ಲಿನಲ್ಲಿ ಮತ್ತೊಮ್ಮೆ!
7. ಚಕ್ರಚರಣೆಗೆ ಸ್ವಾಗತಂ!
8. ಪ್ರೇತವೃಕ್ಷ
9. ಜರ್ಬರಾ
10. ಸೌಂದರ್ಯಯಾಜಿ
11. ಮ್ಯಾಗ್ನೋಲಿಯಾ ಗ್ರಾಂಡಿಫ್ಲೋರಾ ಅಥವಾ ವಿಭೂತಿ ಆಗಮನ
12. ಹೂವಿನ ತೋಟದಲ್ಲಿ ಪುಷ್ಪಸಮಾಧಿ!
13. ಅಧಿದೇವತಾ ಆವಿರ್ಭೂತಿ
14. ಉದ್ಯಾನದಲ್ಲಿ ಧ್ಯಾನಯೋಗಿ
15. ಭಗವಂತನೆ ಕವಿ, ಸಹೃದಯನಾಂ!
16. "ನಮಸ್ತೇ!"
17. ಇಬ್ಬನಿಯವತಾರ!
18. ಹೂವಿನ ತೋಟದಲ್ಲಿ
19. ನಾ ಜಂಗಮ ದೇವಸ್ಥಾನ
20. ಪುಷ್ಪಭಗವಾನ್
21. ಪವಾಡ ಸಂದರ್ಶನ
22. ಒಂದು ಗುಲಾಬಿ ಹೂವಿಗೆ
23. ಹಕ್ಕಿಗಳ ಸಂಗದಲಿ
24. ರಸಾನುಭೂತಿ ಮೌನಮದುವೆ ಕಾವ್ಯದರಮನೆ
25. ಶಶಿಯ ದೋಣಿ
26. ಕ್ಕೂ ಕ್ಕೂ ಕ್ಕೂ!
27. ಸಂಕೇತ ಸಾಕ್ಷಿ
28. ತಾಯಿಯ ಆಶ್ವಾಸನೆ
29. ಓಂ ಅನವರತವೂ!
30. ಓಂ ಕಲ್ ಪುಲ್ ಮಣ್ ಓಂ!
31. ಸಿರಿ ಅಡಿ
32. ಮನೆದಪ್ಪುವುದೆ ಸುಮನೋರಥಂ?
33. ಉದಾಹರಣ ನಾ
34. ಎಚ್ಚರಿಸು ಬಾ ಗುರುವೆ!
35. ದೀಕ್ಷಾ ಶ್ರದ್ಧೆ
36. ಪೂಜಿಸುವರೆಲ್ಲರೂ ಪೂಜ್ಯರೆನೆಗೆ
37. ಶ್ರದ್ಧೆಗಿಹುದೆ ಅಶಿವ ಭೀತಿ?
38. ಅತೀಂದ್ರಿಯ
39. ನಿವೃತ್ತಿಮುಕ್ತನ ಅಭಿಪ್ಸೆ
40. ಅನಿಕೇತನ

**ಅನಿಕೇತನ**

ಓ ನನ್ನ ಚೇತನ,
ಆಗು ನೀ ಅನಿಕೇತನ!

ರೂಪ ರೂಪಗಳನು ದಾಟಿ,
ನಾಮ ಕೋಟಿಗಳನು ಮೀಟಿ,
ಎದೆಯ ಬಿರಿಯೆ ಭಾವದೀಟಿ,
ಓ ನನ್ನ ಚೇತನ,
ಆಗು ನೀ ಅನಿಕೇತನ!

ನೂರು ಮತದ ಹೊಟ್ಟ ತೂರಿ,
ಎಲ್ಲ ತತ್ತ್ವದೆಲ್ಲೆ ಮೀರಿ,
ನಿರ್ದಿಗಂತವಾಗಿ ಏರಿ,
ಓ ನನ್ನ ಚೇತನ,
ಆಗು ನೀ ಅನಿಕೇತನ!

ಎಲ್ಲಿಯೂ ನಿಲ್ಲದಿರು;
ಮನೆಯನೆಂದೂ ಕಟ್ಟದಿರು;
ಕೊನೆಯನೆಂದೂ ಮುಟ್ಟದಿರು;
ಓ ಅನಂತವಾಗಿರು!
ಓ ನನ್ನ ಚೇತನ,
ಆಗು ನೀ ಅನಿಕೇತನ!

ಅನಂತ ತಾನ್ ಅನಂತವಾಗಿ
ಆಗುತಿಹನೆ ನಿತ್ಯಯೋಗಿ;
ಅನಂತ ನೀನ್ ಅನಂತವಾಗು:
ಆಗು, ಆಗು, ಆಗು, ಆಗು,
ಓ ನನ್ನ ಚೇತನ,
ಆಗು ನೀ ಅನಿಕೇತನ!